ಕರ್ನಾಟಕ ಸರ್ಕಾರ
(ಕೃಷಿ ಇಲಾಖೆ)

ಸಂಖ್ಯೆ: ರಗೊವಿ/ಎಎಸ್‌ಡಿ/ರಗೊಸ/2014-15

ಕೇಂದ್ರ ಕಚೇರಿ
ಶೇಷಾದ್ರಿ ರಸ್ತೆ, ಬೆಂಗಳೂರು-1.
ದಿನಾಂಕ: 25.07.2014.

ಇವರಿಗೆ:

**ರಾಜ್ಯದ ಎಲ್ಲಾ ರಸಗೊಬ್ಬರ ತಯಾರಕರಿಗೆ**

ವಿಷಯ: ರಸಗೊಬ್ಬರವನ್ನು ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾ ಮಂಡಳಿಗೆ ಸರಬರಾಜು ಮಾಡುವ ಬಗ್ಗೆ.

ಉಲ್ಲೇಖ: 1) ಈ ಕಚೇರಿಯ ಪತ್ರ ಸಂ: ರಗೊವಿ/ಎಎಸ್‌ಡಿ/ಯೂರಿಯಾ/2014-15 ದಿನಾಂಕ 18.07.14
2) ಈ ಕಚೇರಿಯ ಪತ್ರ ಸಂ: ರಗೊವಿ/ರ.ಕಾ.ದಾ/ಸಂಗ್ರ .ವಿಲೆ/2014-15 ದಿನಾಂಕ 25.07.14

* * * * * * * *

ರಾಜ್ಯದಲ್ಲಿ ರೈತರಿಗೆ ಯಾವುದೇ ಸಂದರ್ಭದಲ್ಲಿಯೂ ರಸಗೊಬ್ಬರಗಳಿಗೆ ಕೊರತೆಯಾಗದಂತೆ ವ್ಯವಸ್ಥೆ ಮಾಡಲು ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳದ ಮೂಲಕ ರಸಗೊಬ್ಬರ ಕಾಪು ದಾಸ್ತಾನು ನಿರ್ವಹಿಸುತ್ತಿರುವುದು ನಿಮಗೂ ತಿಳಿದ ವಿಷಯವಾಗಿದೆ. ರಾಜ್ಯದ ಎಲ್ಲಾ ಭಾಗಗಳಲ್ಲಿ ಉತ್ತಮ ಮಳೆಯಾಗುತ್ತಿದ್ದು ಈಗಾಗಲೇ ಬಿತ್ತನೆಯಾಗಿರುವ ಪ್ರದೇಶಗಳಲ್ಲಿ ಮತ್ತು ನಾಟಿಮಾಡುತ್ತಿರುವ ಪ್ರದೇಶದಲ್ಲಿ ರೈತರಿಂದ ರಸಗೊಬ್ಬರಗಳಿಗೆ ತೀವ್ರ ಬೇಡಿಕೆ ಉಂಟಾಗುತ್ತಿದೆ.

ಎಲ್ಲಾ ಭಾಗದ ಗ್ರಾಮಗಳಲ್ಲಿನ ರೈತರಿಗೂ ರಸಗೊಬ್ಬರ ಪೂರೈಕೆ ಮಾಡಲು ಸಾದ್ಯವಾಗಬೇಕಾದರೆ ಹತ್ತಿರದ ಸಹಕಾರ ಸಂಘಗಳ ಮೂಲಕ ಪೂರೈಕೆ ಮಾಡಿದಾಗ ಮಾತ್ರ ಸಾಧ್ಯವಾಗುತ್ತದೆ. ಈ ಸಂಬಂಧ ಈಗಾಗಲೇ ತಮ್ಮೆಲ್ಲರಿಗೆ ಉಲ್ಲೇಖ-1ರ ಪತ್ರದಲ್ಲಿ ಶೇ 50ರ ಪ್ರಮಾಣದ ಯೂರಿಯಾ ರಸಗೊಬ್ಬರವನ್ನು ಕೆ.ಎಸ್.ಸಿ.ಎಂ.ಎಫ್ ಸಂಸ್ಥೆಗೆ ನೀಡಲು ಸೂಚಿಸಲಾಗಿದೆ.

ಉಲ್ಲೇಖ-2 ರ ಪತ್ರದಲ್ಲಿ ಕೆ.ಎಸ್.ಸಿ.ಎಂ.ಎಫ್ ಸಂಸ್ಥೆಯು ಜಿಲ್ಲೆಗಳಲ್ಲಿ ನಿರ್ವಹಿಸಬೇಕಾದ ಡಿ.ಎ.ಪಿ, ಎಂ.ಒ.ಪಿ ಮತ್ತು ಕಾಂಪ್ಲೆಕ್ಸ್ ರಸಗೊಬ್ಬರಗಳ ವಿವರವನ್ನು ಸೂಚಿಸಲಾಗಿರುತ್ತದೆ.

ಮುಂದುವರೆದು, ಜಿಲ್ಲಾವಾರು ನಿಗಧಿಯಂತೆ ಡಿ.ಎ.ಪಿ, ಎಂ.ಒ.ಪಿ ಮತ್ತು ಕಾಂಪ್ಲೆಕ್ಸ್ ರಸಗೊಬ್ಬರಗಳನ್ನು ಕನಿಷ್ಟ ಶೇಕಡ 15 ರ ಪ್ರಮಾಣದಲ್ಲಿ ಕಡ್ಡಾಯವಾಗಿ ಕೆ.ಎಸ್.ಸಿ.ಎಂ.ಎಫ್ ಶಾಖೆಗಳಿಂದ ಕಡ್ಡಾಯವಾಗಿ ಈಗಾಗಲೇ ದಾಸ್ತಾನಿರುವ ಹಳೇಯದಾದ ರಸಗೊಬ್ಬರಗಳನ್ನು ವಿಲೇವಾರಿ ಮಾಡಿಸಿ ನಂತರ ಸರಬರಾಜು ಮಾಡಲು ಸೂಚಿಸಿದೆ.

ಕೃಷಿ ನಿರ್ದೇಶಕರ ಪರವಾಗಿ

ಪ್ರತಿಯನ್ನು:

1. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾ ಮಂಡಳಿ, ನಂ.8, ಕನ್ನಿಂಗ್‌ಹ್ಯಾಂ ರಸ್ತೆ, ಬೆಂಗಳೂರು-52 ಇವರಿಗೆ ಮಾಹಿತಿಗಾಗಿ ಕಳುಹಿಸಿದೆ.
2. ಜಿಲ್ಲಾ ಜಂಟಿ ಕೃಷಿ ನಿರ್ದೇಶಕರುಗಳಿಗೆ ಮಾಹಿತಿಗಾಗಿ ಹಾಗು ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.